22 126

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3115/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಎಮ್. ಕಿರಣ್ ಕುಮಾರ್ ಹೆಗ್ಡೆ, ಪೆರ್ಮುಡೆ ಗುತ್ತು ಅಂಚೆ, ಮಾಳ ಗ್ರಾಮ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಎಮ್. ಕಿರಣ್ ಕುಮಾರ ಹೆಗ್ಡೆ ಇವರು ಈ ಸಂಸ್ಥೆಗೆ ದೂರನ್ನು ಸಲ್ಲಿಸಿ ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಾಳಾ ಗ್ರಾಮದ ಸರ್ವೆ ನಂ.96/1ಎ1ಎ ಜಮೀನು ಕರ್ನಾಟಕ ಸರ್ಕಾರಕ್ಕೆ ಸೇರಿದ್ದು, ಈ ಜಮೀನಿನಲ್ಲಿ ಶ್ರೀ ಆಧಿನಾಥಸ್ವಾಮಿ ಜೈನ್ ಕೋಟೆ ಬಸದಿಯವರು ಅಕ್ರಮ ಹಾಗೂ ಅನಧೀಕೃತವಾಗಿ ಕಟ್ಟಡವನ್ನು ಕಟ್ಟುತ್ತಿದ್ದು, ಈ ಬಗ್ಗೆ ಎದರುದಾರರಿಗೆ ಮತ್ತು ಸಂಬಂಧಪಟ್ಟವರಿಗೆಲ್ಲಾ ದೂರದಾರರು ಮನವಿಗಳನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಕಾರ್ಕಳ ತಾಲ್ಲೂಕಿನ ತಹಶೀಲ್ದಾರರು ಎನ್.ಸಿ.ಆರ್.ಸಿಆರ್ 28/14-15, ಎನ್.ಸಿ.ಆರ್ ಸಿಆರ್ 134/14-15 ಹಾಗೂ ಎನ್.ಸಿ.ಆರ್.ಸಿಆರ್ 148/14-15 ದಿ:4-5-2015 ರ ನೋಟಿಸ್ ನೀಡಿರುತ್ತಾರೆ, ಇದು ಕಣ್ಣು ಒರೆಸುವ ರೀತಿಯ ಕ್ರಮವಾಗಿರುತ್ತದೆ. ಆದರೆ, ಮುಂದೆ ತಹಶೀಲ್ದಾರರು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ ಹಾಗೂ ಇದು ಅವರ ದುರಾಡಳಿತದ ಉದಾಹರಣೆ ಆಗಿರುತ್ತದೆ. ಆದ್ದರಿಂದ ಸದರಿಯವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದರುದಾರರ ಆಕ್ಷೇಪಣೆಗಳನ್ನು ಕರೆಯಲಾಗಿದ್ದು, ಎದರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. 1ನೇ ಎದರುದಾರರು, ಗ್ರಾಮ ಲೆಕ್ಕಿಗರಾಗಿದ್ದು, ಇವರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಆಪಾದಿಸಿದಂತೆ ಮಾಳಾ ಗ್ರಾಮದ ಸರ್ವೆ ನಂ. ನಂ.96/1ಎ1ಎ ರಲ್ಲಿ 5.12 ಎಕರೆ ಸರ್ಕಾರಿ ಜಮೀನು ಇದ್ದು, ಇದರಲ್ಲಿ ಶ್ರೀ ಸುನೀಲ್ ಇಂದ್ರಾ ರವರು

ಪದ್ಮಾವತಿ ದೇವರ ಚಿಕ್ಕ ಗುಡಿಯನ್ನು ಕಟ್ಟಿರುವವರೆಂದು ಭೂಮಾಪಕರು ತಯಾರಿಸಿರುವ ನಕ್ಷೆಯಿಂದ ದೃಢಪಟ್ಟಿರುತ್ತದೆ. ಸದರಿ ಜಮೀನಿನ ಸರ್ವೆ ನಂ.95/1 ಮತ್ತು 96/1ಎ2 ರ ಕದಿಂ ಜಮೀನಿನ ಕುಮ್ಕಿ ಹಕ್ಕಿನ ಜಮೀನು ಆಗಿರುತ್ತದೆ. ಅದಗ್ಯೂ ಸದರಿ ಜಾಗದಲ್ಲಿ ಕಟ್ಟಡ ರಚನೆ ಮಾಡಲು ಅವಕಾಶ ಇರುವುದಿಲ್ಲ. ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಕಟ್ಟಡ ಕಟ್ಟಿದ್ದು ಅದನ್ನು ತೆರವುಗೊಳಿಸುವಂತೆ ಹಾಗೂ ಕಟ್ಟಡ ಕಟ್ಟಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ತಹಶೀಲ್ದಾರರು ಕಾರ್ಕಳ ಇವರಿಗೆ ಕಂದಾಯ ನಿರೀಕ್ಷಕರು – ಅಜೇಕಾರು ಇವರ ಮುಖಾಂತರ ಗ್ರಾಮ ಲೆಕ್ಕಿಗರ ಕಛೇರಿ ಮಾಳ ಇವರ ಕಡತ ಸಂ: ವಿಐಆರ್ 127/13–14, ವಿಐಆರ್ 248/14–15, ವಿಐಆರ್ 298/14–15, ವಿಐಆರ್ 01/15–16, ವಿಐಆರ್ 22/15–16 ರಂತೆ ವರದಿ ನೀಡಲಾಗಿರುತ್ತದೆ. ಸರ್ಕಾರಿ ಜಮೀನು ಒತ್ತುವರಿ ಆದಲ್ಲಿ ಅಥವಾ ಅಕ್ರಮಣವಾದಲ್ಲಿ ಗ್ರಾಮ ಲೆಕ್ಕಿಗರಿಗೆ ಅಕ್ರಮ ತೆರವುಗೊಳಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಹೀಗಾಗಿ ತಹಶೀಲ್ದಾರರವರಿಗೆ ವರದಿಯನ್ನು ನೀಡಲಾಗಿರುತ್ತದೆ. ತಹಶೀಲ್ದಾರರವರು ಈ ಬಗ್ಗೆ ಕರ್ನಾಟಕ ಭೂಕಂದಾಯ ಅಧಿನಿಯಮ 104 ರಂತೆ ಕ್ರಮ ವಹಿಸಬೇಕಾಗಿರುತ್ತದೆ. ಈ ಬಗ್ಗೆ ತಹಶೀಲ್ದಾರರವರ ನ್ಯಾಯಾಲಯದಲ್ಲಿ ಎನ್.ಸಿ.ಆರ್.ಸಿಆರ್ 28/14–15, ಎನ್.ಸಿ.ಆರ್ಸಿಆರ್ 134/14–15 ಹಾಗೂ ಎನ್.ಸಿ.ಆರ್.ಸಿಆರ್ 148/14–15, ಇದಲ್ಲದೇ ದೂರುದಾರರು ಕಾರ್ಕಳ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ.93/2015 ರಂತೆ ಸಿವಿಲ್ ದಾವೆಯನ್ನು ದಾಖಲಿಸಿರುತ್ತಾರೆ. ಈ ದಾವೆ ಮುಕ್ತಾಯವಾಗುವವರೆಗೆ ಪ್ರಕರಣವನ್ನು ವಿಲೇ ಇಡಬೇಕಾಗಿ ದೂರು ಅರ್ಜಿದಾರರೇ ವಿನಂತಿಸಿ ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಅದರ ಪ್ರತಿಯನ್ನು ತಹಶೀಲ್ದಾರರು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪೊಲೀಸ್ ಉಪಾಧೀಕ್ಷಕರಿಗೆ ನೀಡಿರುತ್ತಾರೆ. ಆದ್ದರಿಂದ, ಸದರಿ ಅಸಲು ದಾವೆಯ ವಾದಿ ಮತ್ತು ಪ್ರತಿವಾದಿಗಳ ವೈಯಕ್ತಿಕ ದ್ವೇಷದಿಂದ ಈ ಪ್ರಕರಣವನ್ನು ದಾಖಲಿಸಲಾಗಿರುತ್ತದೆ. ದೇವರ ಕಟ್ಟೆಯನ್ನು ದೇವರ ಗುಡಿಯನ್ನಾಗಿ ಮಾರ್ಪಾಡು ಮಾಡಿರುವುದರಿಂದ ದೂರುದಾರರಿಗೆ ತೊಂದರೆಯಾಗಿರುತ್ತದೆ. ಆದ್ದರಿಂದ, ಈ ರೀತಿ ದೂರನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ.

3. 2ನೇ ಎದರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ಕಾರಿ ಭೂಮಿಯನ್ನು ಆಕ್ರಮಣಗಳಿಂದ ರಕ್ಷಿಸಲು ಕರ್ನಾಟಕ ಭೂಕಬಳಿಕೆ ನಿಷೇದ ಅಧಿನಿಯಮ–2011 ಅನ್ನು ಸರ್ಕಾರವು ಜಾರಿಗೆ ತಂದಿದ್ದು ಸರ್ಕಾರಿ ಜಮೀನುಗಳ ಅಕ್ರಮಣಗಳನ್ನು ತೆರವುಗೊಳಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ ಇದರ ಅಡಿಯಲ್ಲಿ ಎದರುದಾರರುಗಳು ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಆದ್ದರಿಂದ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ತಾವು ಕರ್ತವ್ಯ ಲೋಪ ಎಸೆಗಿರುವುದಿಲ್ಲ ಎಂದು ಹಾಗೂ ತಮ್ಮ ವಿರುದ್ಧದ ಪ್ರಕರಣವನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಹಾಗೂ 3ನೇ ಎದರುದಾರರು

ಕಂದಾಯ ನಿರೀಕ್ಷಕರಾಗಿದ್ದು ಇವರು ಸಹ 1ನೇ ಎದರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಅನುಸರಿಸಿ ತಮ್ಮ ಆಕ್ಷೇಪಣೆಯನ್ನು ನೀಡಿರುತ್ತಾರೆ.

4. ಎದರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ತಹಶೀಲ್ದಾರರವರು ಸರ್ವೆ ನಂ.96/1ಎ1ಎ ಯಲ್ಲಿ ರಚಿಸುತ್ತಿರುವ ಕಟ್ಟಡದ ಅನಧೀಕೃತವಾಗಿ ರಚಿಸುತ್ತಿರುವುದಾಗಿ ತಿಳಿಸಿ, ಅದನ್ನು ತಕ್ಷಣವೇ ತೆರವುಗೊಳಿಸಲು ತಹಶೀಲ್ದಾರ್‌ರವರು ನೋಟೀಸ್ ನೀಡಿದ್ದು, ಅದರ ಪ್ರತಿಯನ್ನು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಪಡೆದಿರುವುದು ಕಂಡು ಬರುತ್ತದೆ. ಆದ್ದರಿಂದ, ಅಕ್ರಮ ಕಟ್ಟಡವನ್ನು ತೆರವುಗೊಳಿಸಲು ಸೂಕ್ತ ಭದ್ರತೆಯನ್ನು ಕೊಡುವುದಾಗಿ ತಹಶೀಲ್ದಾರರವರು ತಿಳಿಸಿದ್ದರೂ ಕೂಡ ಕಟ್ಟಡಗಳ ನಿಯಂತ್ರಣ ಪ್ರಾಧಿಕಾರಿಯಾಗಿ ಗ್ರಾಮ ಪಂಚಾಯತಿಯ ಕರ್ತವ್ಯ ಮೇಲೆ ಇದ್ದ 2ನೇ ಎದರುದಾರರು ಕರ್ತವ್ಯ ನಿರ್ವಹಿಸಬೇಕಾಗಿದ್ದು, ಆದರೆ ಕರ್ತವ್ಯವನ್ನು ನಿರ್ಲಕ್ಷಿಸಿರುತ್ತಾರೆ. ಕಟ್ಟಡಗಳನ್ನು ರಚಿಸುತ್ತಿರುವ ಬಗ್ಗೆ ಪ್ರಾಧಿಕಾರದ ಮುಂದೆ 2013 ನೇ ಸಾಲಿನಿಂದ ದೂರುದಾರರು ದೂರಗಳನ್ನು ನೀಡುತ್ತಾ ಬಂದಿದ್ದರೂ ಇದುವರೆಗೆ ಯಾವುದೇ ಮಾಹಿತಿಯನ್ನು, ತನಿಖೆಯನ್ನು ನಡೆಸಿರುವ ಬಗ್ಗೆ 2ನೇ ಎದರುದಾರರು ನೀಡಿರುವುದಿಲ್ಲ. ಸದರಿ ಕಟ್ಟಡವು ಸರ್ಕಾರಿ ಜಮೀನಿನಲ್ಲಿದ್ದು ಗ್ರಾಮ ಪಂಚಾಯತಿಯಿಂದ ಪರವಾನಿಗೆಯನ್ನು ಪಡೆದು ಸರ್ಕಾರಿ ಜಮೀನಿನಲ್ಲಿ ಕಟ್ಟಡ ರಚನೆಗೆ ಬಳಸಿಕೊಂಡಿರುವುದು ಅಕ್ರಮವಾಗಿರುತ್ತದೆ. ಹಾಗೆಯೇ ಸರ್ಕಾರಿ ಜಮೀನನ್ನು ಕಾಪಾಡುವುದು ಕಂದಾಯ ಇಲಾಖೆಯ ಕರ್ತವ್ಯವಾಗಿರುತ್ತದೆ. ಆದ್ದರಿಂದ, ಎದರುದಾರರುಗಳು ಕರ್ತವ್ಯಲೋಪ ಎಸೆಗಿರುವುದು ಕಂಡುಬರುತ್ತದೆ. ಈ ಹಿನ್ನಲೆಯಲ್ಲಿ ಎದರುದಾರರುಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

5. ದೂರಿನಂಶಗಳನ್ನು, ಎದರುದಾರರ ಆಕ್ಷೇಪಣೆಯನ್ನು, ದೂರುದಾರರ ಪ್ರತ್ಯುತ್ತರವನ್ನು ಹಾಗೂ ಹಾಜರುಪಡಿಸಿರುವ ದಾಖಲೆಯನ್ನು ಪರಿಶೀಲಿಸಲಾಗಿ, ಸರ್ವೆ ನಂ.96/1ಎ1ಎ ರಲ್ಲಿ ರಚಿಸಿರುವ ಕಟ್ಟಡವು ಜೈನ್ ಮತದವರಿಗೆ ಸೇರಿದ ಕಟ್ಟಡ ಆಗಿರುತ್ತದೆ. ಹಾಗೆಯೇ ಸದರಿ ಜಮೀನು ಸರ್ಕಾರಿ ಜಮೀನು ಆಗಿದ್ದು ಅದನ್ನು ಕಾಪಾಡುವುದು ಕಂದಾಯ ಇಲಾಖೆಯ ಕರ್ತವ್ಯ ಆಗಿರುತ್ತದೆ. ಆದರೆ, ಕುಮ್ಕಿ ಹಕ್ಕಿನ ಭೂಮಿಯ ಬಗ್ಗೆ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯತಿಗೆ ಅಧಿಕಾರ ಇರುವುದಿಲ್ಲ ಹಾಗೂ ಈ ಬಗ್ಗೆ ಕಾರ್ಕಳ ತಾಲ್ಲೂಕ ತಹಶೀಲ್ದಾರರಿಗೆ ದಿನಾಂಕ:8-5-2015 ರಂದು ವಿವರವಾದ ವರದಿಯನ್ನು ಸಲ್ಲಿಸಲಾಗಿರುತ್ತದೆ. ಇದಲ್ಲದೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರ್ಕಳದ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ.93/2015 ಬಾಕಿ ಇರುವುದಾಗಿ ತಿಳಿಸಿರುತ್ತಾರೆ ಮತ್ತು ದೂರುದಾರರು ವಿನಂತಿ ಪತ್ರ ನೀಡಿ ಪ್ರಕರಣಕ್ಕೆ ಸಂಬಂಧಿಸಿದ ಕಟ್ಟಡವನ್ನು ತೆರವುಗೊಳಿಸಲು ನೋಟಿಸ್ ಅನ್ನು ಜಾರಿ ಮಾಡಲಾಗಿರುತ್ತದೆ. ಸದರಿ ನೋಟಿಸ್‌ನಂತೆ ತೆರವು ಕಾರ್ಯವನ್ನು ತಹಶೀಲ್ದಾರರು

123



ನಿರ್ವಹಿಸಬೇಕಾಗಿರುತ್ತದೆ. ಪ್ರಕರಣದಲ್ಲಿ ತಹಶೀಲ್ದಾರ್‌ರವರು ಸದರಿ ಮಾಳ ಗ್ರಾಮದ ಸರ್ವೇ ನಂಬರ್ 96/1ಎ1ಎ ಸರ್ಕಾರಿ ಸ್ಥಳದಲ್ಲಿ ಅಕ್ರಮವಾಗಿ ಕಟ್ಟಡ ಕಟ್ಟುತ್ತಿರುವ ಬಗ್ಗೆ ನೋಟೀಸ್ ನೀಡಿದ್ದು, ಸದರಿ ನೋಟೀಸ್‌ನಲ್ಲಿ ಅಕ್ರಮವಾಗಿ ಗುಡಿಯ ರೀತಿಯ ಕಟ್ಟಡವನ್ನು ಅನಧೀಕೃತವಾಗಿ ರಚಿಸುತ್ತಿರುವುದು ಕಂಡು ಬಂದ ಕಾರಣ, ಅಕ್ರಮದ ಕಟ್ಟಡ ಕಾಮಗಾರಿಯನ್ನು ಕೂಡಲೇ ನಿಲ್ಲಿಸುವಂತೆ ತಿಳಿಸಲಾಗಿದ್ದು, ಆದರೆ, ಸದರಿ ಜಮೀನು ತನ್ನ ಪಟ್ಟಾ ಸ್ಥಳವೆಂದು ಆಕ್ರಮಣದಾರರು ವಾದಿಸುತ್ತಾ, ಕಟ್ಟಡದ ಕಾಮಗಾರಿಯನ್ನು ರಾತ್ರಿ ಹೊತ್ತು ಕೈಗೊಂಡು ಮುಂದುವರೆಸಿರುವುದು ಕಂಡು ಬರುತ್ತದೆ. ಆಕ್ರಮಣದಾರರು ಸರ್ಕಾರಿ ಸರ್ವೇ ನಂಬರ್ 96/1ಎ1ಎಯಲ್ಲಿ ಅಕ್ರಮವಾಗಿ ಕಟ್ಟಡ ರಚಿಸುತ್ತಿರುವುದು ಸರ್ವೇ ವರದಿಯಿಂದ ರುಜುವಾತಾಗಿರುತ್ತದೆ. ಆದ್ದರಿಂದ, ಸದರಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಬೇಕೆಂದು ತಿಳಿಸಿರುವುದು ಕಂಡು ಬರುತ್ತದೆ. ಗ್ರಾಮಲೆಕ್ಕಿಗರು ತಹಶೀಲ್ದಾರ್‌ರವರಿಗೆ ವರದಿಯನ್ನು ನೀಡಿ ಅದರಲ್ಲಿ ಶ್ರೀ ಸುನೀಲ್ ಕುಮಾರ್ ರವರು ಅಕ್ರಮ ಕಟ್ಟಡ ಕಟ್ಟುತ್ತಿರುವ ಬಗ್ಗೆ ವರದಿ ಮಾಡಿರುವುದು ಕಂಡು ಬರುತ್ತದೆ (ಸದರಿ ವರದಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ). ತಹಶೀಲ್ದಾರ್, ಕಾರ್ಕಳ ರವರು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ಇವರಿಗೆ ದಿನಾಂಕ 29/08/2015 ರಂದು ಪತ್ರ ಬರೆದು, ಶ್ರೀ ಸುನೀಲ್ ಇಂದ್ರ ರವರು ಮಾಳ ಗ್ರಾಮದ ಸರ್ವೇ ನಂಬರ್ 96/1ಎ1ಎ ಯಲ್ಲಿ 0.01.50 ಎಕರೆ ಸ್ಥಳದಲ್ಲಿ ಅನಧೀಕೃತವಾಗಿ ಪದ್ಮಾವತಿ ಅಮ್ಮನವರ ದೇವರ ಗುಡಿ ರಚಿಸುತ್ತಿರುತ್ತಾರೆ. ತಾಲ್ಲೂಕು ಭೂಮಾಪಕರ ವರದಿ ಪ್ರಕಾರ ಸದರಿ ಸ್ಥಳವು ಸರ್ಕಾರಿ ಜಮೀನಾಗಿರುತ್ತದೆ. ಹಾಗೂ ಸರ್ವೇ ನಂಬರ್ 95/1ಎ ಮತ್ತು 96/1ಎ2 ರ ಜಾಗಗಳು ಕುಮ್ಕಿ ಪರಿಮಿತಿಯಲ್ಲಿರುತ್ತದೆ. ಹಿಂದೆ ಜೀರ್ಣಾವಸ್ಥೆಯಲ್ಲಿದ್ದ ಕಟ್ಟೆಯನ್ನು ಪುನ: ರಚಿಸುತ್ತಿರುವುದಾಗಿ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಹೇಳಿಕೆ ನೀಡಿರುತ್ತಾರೆ. ಈ ಬಗ್ಗೆ ತಾಲ್ಲೂಕು ಸರ್ವೇಯರ್ ರವರು ನಕ್ಷೆ ತಯಾರಿಸಿದ್ದು, ಸದರಿ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಸರ್ಕಾರಿ ಜಮೀನನ್ನು ಆಕ್ರಮಣ ಮಾಡಿರುವುದುಮ ಕಂಡು ಬರುತ್ತದೆ ಎಂದು ತಿಳಿಸಿರುತ್ತಾರೆ.

6. 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಭೂಮಾಪಕರು ತಯಾರಿಸುವ ನಕ್ಷೆಯಿಂದ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಸರ್ವೇ ನಂಬರ್ 96/1ಎ1ಎ ಸರ್ಕಾರಿ ಜಮೀನಿನಲ್ಲಿ ದೇವರ ಗುಡಿಯನ್ನು ಕಟ್ಟಿರುತ್ತಾರೆಂದು ದೃಢಪಟ್ಟಿರುತ್ತದೆ. ಇದಲ್ಲದೇ, ಶ್ರೀ ಸುನೀಲ್ ಕುಮಾರ್ ಇಂದ್ರ ರವರು ತನ್ನದೆಂದು ಹೇಳಲಾಗುತ್ತಿರುವ ಜಮೀನು ಸರ್ವೇ ನಂ.95/1 ಮತ್ತು 96/1ಎ2ರ ಕದಿಮ್ ಜಮೀನುಗಳು ಕುಮ್ಕಿ ಹಕ್ಕಿನ ಜಮೀನುಗಳಾಗಿರುತ್ತವೆ. ಆದಾಗ್ಯೂ ಸಹ ಸದರಿ ಜಮೀನಿನಲ್ಲಿ ಕಟ್ಟಡ ರಚನೆ ಮಾಡಲು ಅವಕಾಶವಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಸದರಿ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ಅಕ್ರಮ ಕಟ್ಟಡವನ್ನು ಕಟ್ಟುತ್ತಿರುವುದಾಗಿ ಕಂಡು ಬಂದಿರುತ್ತದೆ. ಆದರೆ, ತಹಶೀಲ್ದಾರ್‌ರವರು ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಉಡುಪಿ ಜಿಲ್ಲೆ

ಇವರಿಗೆ ಬರೆದಿರುವ ಪತ್ರದಲ್ಲಿ ಪ್ರಕರಣದ ದೂರುದಾರರು ಪ್ರಕರಣದಲ್ಲಿ ಒಳಗೊಂಡ ಜಮೀನಿಗೆ ಸಂಬಂಧಿಸಿದಂತೆ ಅಸಲು ದಾವೆ ಸಂ:93/2015ರ ಸಿವಿಲ್ ದಾವಾ ವನ್ನು ಕಾರ್ಕಳದ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ ಹಾಗೂ ಅದು ವಿಲೇಗೆ ಬಾಕಿ ಇರುವ ಬಗೆಗೂ ಸಹ ತಿಳಿಸಿರುತ್ತಾರೆ. ಇದಲ್ಲದೇ, ತಹಶೀಲ್ದಾರ್ ನ್ಯಾಯಾಲಯದಲ್ಲಿ ಎನ್‌ಸಿಆರ್‌ಸಿಆರ್28/2014–15 ಮತ್ತು ಎನ್‌ಸಿಆರ್‌ಸಿಆರ್134/2014–15 ಮತ್ತು ಎನ್‌ಸಿಆರ್‌ಸಿಆರ್148/2014–15 ವಿಲೇಗೆ ಬಾಕಿ ಇರುವುದಾಗಿ ಕಂಡು ಬರುತ್ತದೆ. ಆದರೆ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಅಸಲು ದಾವೆ ಸಂಖ್ಯೆ:93/2015ರ ಪ್ರಕರಣವು ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ಏನನ್ನು ತಿಳಿಸಿರುವುದಿಲ್ಲ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಶ್ರೀ ಸುನಿಲ್ ಕುಮಾರ್ ಇಂದ್ರ ಇವರು ಸರ್ವೇ ನಂಬರ್ 96/1ಎ1ಎ ಯಲ್ಲಿ ಅಕ್ರಮವಾಗಿ ಕಟ್ಟಡ ರಚಿಸುತ್ತಿರುವುದು ಕಂಡು ಬರುತ್ತದೆ. ಹಾಗೆಯೇ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ತಾವು ಕಟ್ಟಿರುವ ದೇವಸ್ಥಾನದ ಬಹುಭಾಗವು ತಮ್ಮ ಪಟ್ಟಾ ಜಾಗದಲ್ಲಿ ಇರುವುದಾಗಿಯೂ ತಿಳಿಸಿದ್ದು, ಈ ಸದರಿ ಜಾಗವು ಕುಮ್ಕಿ ಜಮೀನೆಂದು 3ನೇ ಎದುರುದಾರರು ತಿಳಿಸಿರುತ್ತಾರೆ. ಆದ್ದರಿಂದ, ದೇವಸ್ಥಾನ ಕಟ್ಟಿರುವ ಜಾಗದ ಬಗ್ಗೆ ಸದರಿ ಜಾಗವು ಶ್ರೀ ಸುನೀಲ್ ಕುಮಾರ್ ಇಂದ್ರ ಅವರಿಗೆ ಕಟ್ಟಡ ಕಟ್ಟಲು ಹಕ್ಕಿರಲಿಲ್ಲವೆಂಬುದಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದಾಗ್ಯೂ, ಸರ್ಕಾರಿ ಜಮೀನಿನಲ್ಲಿ ಶ್ರೀ ಸುನೀಲ್ ಕುಮಾರ್ ಇಂದ್ರ ರವರು ದೇವಸ್ಥಾನವನ್ನು ಕಟ್ಟಿರುವುದು ಸ್ಪಷ್ಟ ಪಟ್ಟಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಕಟ್ಟಿರುವ ಸದರಿ ಕಟ್ಟಡವನ್ನು ತೆರವುಗೊಳಿಸಲು ನ್ಯಾಯಯುತವಾದ ಕ್ರಮ ಜರುಗಿಸಲು ಈ ಮೂಲಕ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ **ಅಲ್ಲಿಂದ ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27/5/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**